ಕಾರಾಗೃಹ ಸಿಬ್ಬಂದಿ ವೇತನದ ತಾರತಮ್ಯ

೪೦೪೨. ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೭೬ರಿಂದಲೂ ಪೊಲೀಸ್ ಸಿಬ್ಬಂದಿ ಹಾಗೂ ಕಾರಾಗೃಹ ಸಿಬ್ಬಂದಿಗಳ ವೇತನ ತಾರತಮ್ಯದ ವಿವರ ಸರ್ಕಾರದ ಮುಂದಿದ್ದು ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಆ) ಕಾರಾಗೃಹ ಸಿಬ್ಬಂದಿಗೆ ಹಾಗೂ ಪೊಲೀಸ್ ಸಿಬ್ಬಂದಿಗೆ ಪರಿಷ್ಕೃತ ವೇತನವನ್ನು ನೀಡಿದಲ್ಲಿ ಸರ್ಕಾರದವರಿಗೆ ಒಟ್ಟು ತಗಲುವ ವೆಚ್ಚವೆಷ್ಟು ?

ಇ) ಈ ಬಗ್ಗೆ ರಚಿಸಲಾಗಿದ್ದ ಕಾರಾಗೃಹ ಸುಧಾರಣಾ ಸಮಿತಿಯು ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಿಲ್ಲವೆ ? ವಿಳಂಬವಾಗಿರುವುದಕ್ಕೆ ಕಾರಣಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಯವರು).—

ಅ) ಮತ್ತು ಆ) ವೇತನ ಆಯೋಗದ ಶಿಫಾರಸ್ಸಿನ ಮೇರೆಗೆ ಸರ್ಕಾರವು ಕಾಲಕಾಲಕ್ಕೆ ಸರ್ಕಾರದ ವಿವಿಧ ವರ್ಗ ಮತ್ತು ಇಲಾಖೆಗಳ ವೇತನ ಶ್ರೇಣಿಗಳನ್ನು ಪರಿಷ್ಕರಿಸಲಾಗುತ್ತದೆ. ಪೊಲೀಸ್ ದಳವು ಒಂದು ಪ್ರತ್ಯೇಕ ಹಾಗೂ ವೈಶಿಷ್ಟ್ಯವಾದ ಇಲಾಖೆಯಾಗಿದ್ದು ೧೯೭೬ರ ನಂತರದ ವೇತನ ವಿಯೋಗಗಳು ಕಾರಾಗೃಹ ಇಲಾಖೆಗಿಂತ ವಿಭಿನ್ನವಾದ ಪ್ರತಿಯೊಂದು ವರ್ಗಕ್ಕೂ ಬೇರೆ ವೇತನ ಶ್ರೇಣಿಗಳನ್ನು ಪರಿಷ್ಕರಿಸಿ ಶಿಫಾರಸ್ಸು ಮಾಡಿರುತ್ತೇವೆ. ಆದುದರಿಂದ ಕಾರಾಗೃಹ ಇಲಾಖೆಗಳ ಸಿಬ್ಬಂದಿ ಹಾಗೂ ಪೊಲೀಸ್ ಇಲಾಖೆಗಳ ಸಿಬ್ಬಂದಿ ನಡುವಣ ವೇತನ ಶ್ರೇಣಿಗಳನ್ನು ಸಾಮ್ಯ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ರಾಜ್ಯ ಸರ್ಕಾರವು ಇಂತಹ ಯಾವುದೇ ಸಮಿತಿಯನ್ನು ರಚಿಸಿರುವುದಿಲ್ಲ.

ರಾಜ್ಯದಲ್ಲಿ ಸಂದರ್ಶನಗಳು ನಡೆದೂ ನೇಮಕಾತಿ ಆಗದಿರುವ ಬಗ್ಗೆ

೫೦೯೭. ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಂದರ್ಶನಗಳು ನಡೆದು ಇದುವರೆಗೂ ನೇಮಕಾತಿ ಆಗದಿರುವ ಸರಕಾರಿ ಹುದ್ದೆಗಳು ಯಾವುವು ? ಎಂದಿನಿಂದ ಖಾಲಿ ಇದೆ (ಇಲಾಖಾವಾರು ವಿವರಗಳನ್ನೂ ನೀಡುವುದು).

ಆ) ಈ ಹುದ್ದೆಗಳನ್ನು ನೇಮಕಾತಿ ಮಾಡಲು ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಯವರು).—

ಅ) ಮತ್ತು ಆ) ಈಗ ಲಭ್ಯವಿರುವ ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ಕೊಡಲಾಗಿದೆ

ಕ್ರಮ ಸಂಖ್ಯೆ	ಇಲಾಖೆ ನೇಮಕಾತಿ ಪ್ರಾಧಿಕಾರ	ಸಂದರ್ಶನವನ್ನು ನಡೆಸಿ ಭರ್ತಿ ಮಾಡಬೇಕಾಗಿರುವ ಹುದ್ದೆಗಳು	ಯಾವಾಗಿನಿಂದ ಖಾಲಿಯಿದೆ	ಕಾರಣಗಳು	ಈ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಳ್ಳುವ ಕ್ರಮ
೧	೨	೩	೪	೫	೬
೧	ಲೋಕೋಪಯೋಗಿ, ಕಾಡಾ ಮತ್ತು ವಿದ್ಯುತ್‌ಚ್ಛಕ್ತಿ ಇಲಾಖೆ	ಡೆಪ್ಯುಟಿ ಆರ್ಕಿಟೆಕ್ಟ್	೧೫-೧೧-೧೯೮೬	ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಆಯ್ಕೆ ಪಟ್ಟಿಯನ್ನು ಪ್ರಕಟಿಸಲು ತಡೆಯಾಜ್ಞೆ ಹೊರಡಿಸಿರುವುದರಿಂದ.	ತಡೆಯಾಜ್ಞೆಯನ್ನು ಹಿಂತೆಗೆದುಕೊಂಡ ನಂತರ ಹುದ್ದೆಗಳನ್ನು ಭರ್ತಿಮಾಡಲಾಗುವುದು.
೨	ಸಾರಿಗೆ	ಮೋಟಾರು ವಾಹನ ತನಿಖಾಧಿಕಾರಿ	೨೨-೬-೧೯೮೭	ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಆಯ್ಕೆಪಟ್ಟಿಯನ್ನು ಅನೂರ್ಜಿತಗೊಳಿಸಿರುವುದರಿಂದ	ಈ ವಿಷಯವು ಸರ್ವೋಚ್ಚ ನ್ಯಾಯಾಲಯದ ಮುಂದೆ ಅಪೀಲು ಇದೆ. ಸರ್ವೋಚ್ಚ ನ್ಯಾಯಾಲಯದಿಂದ ಅಪೀಲಿನ ಬಗ್ಗೆ ತೀರ್ಪು ಬಂದ ತಕ್ಷಣವೇ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.
೩	ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ	ಆಯುರ್ವೇದ ವೈದ್ಯಾಧಿಕಾರಿ	.....	ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಆಯ್ಕೆಪಟ್ಟಿಯನ್ನು ಅನೂರ್ಜಿತಗೊಳಿಸಿರುವುದರಿಂದ	ಈ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯದ ಮುಂದೆ ಅಪೀಲು ಸಲ್ಲಿಸಿದ್ದು, ಸರ್ವೋಚ್ಚ ನ್ಯಾಯಾಲಯವು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ತೀರ್ಪಿಗೆ ತಡೆಯಾಜ್ಞೆ ನೀಡಿದೆ. ಸರ್ವೋಚ್ಚ ನ್ಯಾಯಾಲವು ತೀರ್ಪು ನೀಡಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

1	2	3	4	5	6
೪	ವಾಣಿಜ್ಯ ತೆರಿಗೆ	ವಾಣಿಜ್ಯ ತೆರಿಗೆ ಅಧಿಕಾರಿಗಳು ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಗಳು	.....	ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಆಯ್ಕೆಪಟ್ಟಿಯನ್ನು ಅನೂರ್ಜಿತಗೊಳಿಸಿರುವುದರಿಂದ	ಈ ವಿಷಯವು ಸರ್ವೋಚ್ಚ ನ್ಯಾಯಾಲಯದ ಮುಂದೆ ಅಪೀಲು ಇದೆ ಸರ್ವೋಚ್ಚ ನ್ಯಾಯಾಲಯದಿಂದ ಅಪೀಲಿನ ಬಗ್ಗೆ ತೀರ್ಪು ಬಂದ ತಕ್ಷಣವೇ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.
೫	ರಾಜ್ಯ ಲೆಕ್ಕ ಪತ್ರ	ಸಹಾಯಕ ನಿಯಂತ್ರಕರು	.....	–ಅದೇ–	–ಅದೇ–
೬	ಸಿ.ಆ.ಸು.ಇ. (ಸೇವೆಗಳು)	ಸಹಾಯಕ ಆಯುಕ್ತರು	.....	–ಅದೇ–	–ಅದೇ–
೭	ಕಾರ್ಮಿಕ ಆಯುಕ್ತರ ಕಛೇರಿ	ಸಹಾಯಕ ಕಾರ್ಮಿಕ ಆಯುಕ್ತರು ಕಾರ್ಮಿಕ ಅಧಿಕಾರಿಗಳು	.....	–ಅದೇ–	ಈ ವಿಷಯವು ಸರ್ವೋಚ್ಚ ನ್ಯಾಯಾಲಯದಮುಂದೆ ಅಪೀಲು ಇದೆ. ಸರ್ವೋಚ್ಚ ನ್ಯಾಯಾಲಯದಿಂದ ಅಪೀಲಿನ ಬಗ್ಗೆ ತೀರ್ಪು ಬಂದ ತಕ್ಷಣವೇ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.
೮	ಪೋಲೀಸ್	ಡೆಪ್ಯೂಟಿ ಪೋಲೀಸ್ ಸೂಪರಿಂಟೆಂಡೆಂಟ್	.....	–ಅದೇ–	–ಅದೇ–
೯	ಅಬಕಾರಿ	ಡೆಪ್ಯೂಟಿ ಅಬಕಾರಿ ಸೂಪರಿಂಟೆಂಡೆಂಟ್	.....	–ಅದೇ–	–ಅದೇ–
೧೦	ಕಾರಾಗೃಹ	ಸಹಾಯಕ ಕಾರಾಗೃಹ ಸೂಪರಿಂಟೆಂಡೆಂಟ್	.....	–ಅದೇ–	–ಅದೇ–
೧೧	ಸಮಾಜ ಕಲ್ಯಾಣ	ಸಮಾಜ ಕಲ್ಯಾಣ ಜಿಲ್ಲಾಧಿಕಾರಿಗಳು	.....	–ಅದೇ–	–ಅದೇ–

೧೨	ಉದ್ಯೋಗ ಮತ್ತು ತರಬೇತಿ	ಉದ್ಯೋಗಾಧಿಕಾರಿ	.....	–ಅದೇ–	–ಅದೇ–
೧೩	ಪೌರಾಡಳಿತ	ಮುಖ್ಯ ಅಧಿಕಾರಿ ಗ್ರೇಡ್–೧	.....	–ಅದೇ–	–ಅದೇ–
೧೪	ತೂಕ ಮತ್ತು ಅಳತೆ	ತೂಕ ಮತ್ತು ಅಳತೆಯ ಸಹಾಯಕ ನಿಯಂತ್ರಕರು	.....	–ಅದೇ–	–ಅದೇ–
೧೫	ಮೂಲಕಟ್ಟೆ	ಜಿಲ್ಲಾ ಮೂಲಕಟ್ಟೆ ಅಧಿಕಾರಿ	.....	–ಅದೇ	–ಅದೇ–
೧೬	ಆಹಾರ ಮತ್ತು ನಾಗರೀಕ ಸರಬರಾಜು	ಆಹಾರ ತಹಸೀಲ್ದಾರರು	.....	–ಅದೇ–	–ಅದೇ–
೧೭	ತೋಟಗಾರಿಕೆ	ತೋಟಗಾರರು	೧೯–೭–೧೯೮೫	ಕೆಲವು ಜಿಲ್ಲೆಗಳಲ್ಲಿ ಸಂದರ್ಶನಗಳು ನಡೆದಿದ್ದು ಆಯ್ಕೆಪಟ್ಟಿ ಬಂದಿದೆ ಇನ್ನೂ ಕೆಲವು ಜಿಲ್ಲೆಗಳಲ್ಲಿ ಆಯ್ಕೆಗಾಗಿ ಸಂದರ್ಶನ ನಡೆಯುತ್ತಿದೆ.	ಸಂದರ್ಶನವು ಎಲ್ಲ ಜಿಲ್ಲೆಗಳಲ್ಲಿ ಪೂರ್ಣಗೊಂಡ ನಂತರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.
೧೮	ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಇಲಾಖೆ	ಸಹಾಯಕ ಅಭಿವೃದ್ಧಿ ಅಧಿಕಾರಿ	೧೯೮೬	ಪೋಲೀಸ್ ವರದಿ ಮತ್ತು ತಹಶೀಲ್ದಾರರಿಂದ ವರದಿಯು ಬರಬೇಕಾಗಿದೆ.	ವರದಿಗಳು ಬಂದ ನಂತರ ನೇಮಕಾತಿ ಆದೇಶ ನೀಡಲಾಗುವುದು.